# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು-572103

ಸಂಖ್ಯೆ: ತುವಿ:ವಿ.ವಿ.ಪ/ಸಿಂ.ವಿ:2026-27: 2060

ದಿನಾಂಕ:25.08.2026

## ಅಧಿಸೂಚನೆ

**ವಿಷಯ:** **ಶಿಕ್ಷಣ ಮಹಾವಿದ್ಯಾಲಯಗಳ ಸಹ ಪ್ರಾಧ್ಯಾಪಕರ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸುತ್ತಿರುವ ಕುರಿತು.**

ಉಲ್ಲೇಖ:
1. ಈ ಕಚೇರಿ ಸುತ್ತೋಲೆ ಸಂಖ್ಯೆ:ತು.ವಿ/ವಿ.ವಿ.ಪ/ಸಿಂ.ವಿ/:2026-27:784 ದಿನಾಂಕ:01.06.2026
2. ಕರಡು ಅಧಿಸೂಚನೆ ಸಂಖ್ಯೆ:ತು.ವಿ/ವಿ.ವಿ.ಪ/ಸಿಂ.ವಿ/:2026-27:1633 ದಿನಾಂಕ: 03.08.2026
3. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 23.08.2026

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 21, (01) ರಲ್ಲಿ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

**"ಜ್ಯೇಷ್ಠತೆಯ ಅನುಸಾರ ಪ್ರತಿಯೊಂದು ವ್ಯಾಸಂಗ ವಿಭಾಗದಲ್ಲಿ ಒಬ್ಬ ಪ್ರಾಧ್ಯಾಪಕನು ಸರದಿಯ ಪ್ರಕಾರ ಎರಡು ವರ್ಷಗಳ ಅವಧಿಗೆ ವ್ಯಾಸಂಗ ವಿಭಾಗದ ಡೀನ್ ಆಗಿ ಕಾರ್ಯನಿರ್ವಹಿಸತಕ್ಕದ್ದು, ಪರಂತು, ವ್ಯಾಸಂಗ ವಿಭಾಗದಲ್ಲಿ ಡೀನ್ ಆಗಿ ಕಾರ್ಯನಿರ್ವಹಿಸಲು ವ್ಯಾಸಂಗ ವಿಭಾಗದಲ್ಲಿ ಯಾವ ವ್ಯಕ್ತಿಯೂ ದೊರೆಯದಿದ್ದಲ್ಲಿ ಅಥವಾ ವಿಶ್ವವಿದ್ಯಾನಿಲಯವು ಯಾವುದೇ ವ್ಯಾಸಂಗ ವಿಭಾಗಕ್ಕೆ ಅಧ್ಯಯನಗಳ ವಿಭಾಗವನ್ನು ಹೊಂದಿಲ್ಲದಿದ್ದರೆ, ಆಗ, ಕುಲಪತಿಯು, ಜ್ಯೇಷ್ಠತೆಯ ಆಧಾರದ ಮೇಲೆ ವ್ಯಾಸಂಗ ವಿಭಾಗದ ಡೀನ್ ಆಗಿ ಕಾರ್ಯ ನಿರ್ವಹಿಸಲು ಯಾವುದೇ ಸಂಯೋಜಿತ ಕಾಲೇಜಿನ ಅಧ್ಯಯನಗಳ ವಿಭಾಗದಲ್ಲಿ ಅಂಥ ಅಧ್ಯಾಪಕನು ನಾಮನಿರ್ದೇಶನ ಮಾಡಬಹುದು."**

ಸದರಿ ಪ್ರಕರಣದಡಿಯಲ್ಲಿ ಶಿಕ್ಷಣ ನಿಕಾಯದ ಡೀನರಾಗಿ ನಾಮನಿರ್ದೇಶನ ಮಾಡುವ ಸಂಬಂಧ, ಜ್ಯೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲು ಬಿ.ಇಡಿ., ಅಧ್ಯಾಪಕರುಗಳ ಸೇವಾ ವಿವರಗಳನ್ನು ಸಲ್ಲಿಸಲು ಉಲ್ಲೇಖ (01)ರಲ್ಲಿ ಸುತ್ತೋಲೆ ಹೊರಡಿಸಲಾಗಿತ್ತು. ಈ ಸಂಬಂಧ, ಬಿ.ಇಡಿ. ಕಾಲೇಜುಗಳ ಅಧ್ಯಾಪಕರುಗಳು ಸಲ್ಲಿಸಿರುವ ಮಾಹಿತಿಯನ್ನು ಪರಿಶೀಲಿಸಿ, ಸಹ ಪ್ರಾಧ್ಯಾಪಕರುಗಳಾಗಿ ಪದೋನ್ನತಿ ಹೊಂದಿರುವುದನ್ನು ಹಾಗೂ ಅದರ ಸೇವೆಯನ್ನು ಪರಿಗಣಿಸಿ, ಉಲ್ಲೇಖ (02) ರಲ್ಲಿ ಸಹ ಪ್ರಾಧ್ಯಾಪಕರ ಕರಡು ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ, ಆಕ್ಷೇಪಣೆಯನ್ನು ಆಹ್ವಾನಿಸಲಾಗಿತ್ತು. ಈ ಸಂಬಂಧ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ.

ಈ ಹಿನ್ನೆಲೆಯಲ್ಲಿ, ಶಿಕ್ಷಣ ಮಹಾವಿದ್ಯಾಲಯಗಳ ಸಹ ಪ್ರಾಧ್ಯಾಪಕರುಗಳು ಸಲ್ಲಿಸಿರುವ ಸೇವಾ ವಿವರಗಳ ಜೇಷ್ಠತಾ ಪಟ್ಟಿಯನ್ನು ಆಧರಿಸಿ ದಿನಾಂಕ: 17.08.2026ಕ್ಕೆ ಇರುವಂತೆ ಅಂತಿಮ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿ, ವಿಶ್ವವಿದ್ಯಾನಿಲಯದ htttps://tumkuruniversity.ac.in ಜಾಲತಾಣದಲ್ಲಿ ಪ್ರಕಟಿಸಲಾಗಿರುತ್ತದೆ.

**ಕುಲಸಚಿವರು**

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಗೆ,

**ಪ್ರಾಂಶುಪಾಲರುಗಳು, ಸಂಯೋಜಿತ ಶಿಕ್ಷಣ ಮಹಾವಿದ್ಯಾಲಯಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**

**ವಿಶೇಷ ಸೂಚನೆ:**

ಅಂತಿಮ ಜೇಷ್ಠತಾ ಪಟ್ಟಿ ಪ್ರಕಟವಾದ ನಂತರ ಯಾವುದೇ ಸೇರ್ಪಡೆಗಳಿಗೆ ಮತ್ತು ತಿದ್ದುಪಡಿಗಳಿಗೆ ಅವಕಾಶ ಇರುವುದಿಲ್ಲ.

**ಪ್ರತಿಗಳು:**

1) ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2) ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು (ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಣಾದಲ್ಲಿ ಪ್ರಕಟಿಸುವುದು)
3) ಕಚೇರಿ ಪ್ರತಿ.

# ತುಮಕೂರು ವಿಶ್ವವಿದ್ಯಾನಿಲಯ
## ಶಿಕ್ಷಣ ಮಹಾವಿದ್ಯಾಲಯಗಳ ಸಹ ಪ್ರಾಧ್ಯಾಪಕರ ಜ್ಯೇಷ್ಠತಾ ಪಟ್ಟಿ
*(ಆಗಸ್ಟ್ 17, 2026 ರಲ್ಲಿದ್ದಂತೆ ಒಟ್ಟು ಸೇವೆಯ ಜ್ಯೇಷ್ಠತೆಯ ಆಧಾರದ ಮೇಲೆ)*

## ಜ್ಯೇಷ್ಠತಾ ಪಟ್ಟಿ ವಿವರಗಳು

| ಕ್ರ. ಸಂ. | ಶಿಕ್ಷಕರ/ಅಧ್ಯಾಪಕರ ಹೆಸರು | ಹುದ್ದೆ | ಜನ್ಮ ದಿನಾಂಕ | ನೇಮಕಾತಿ ಹೊಂದಿದ ಕಾಲೇಜಿನ ಹೆಸರು (ಎಲ್ಲಿಂದ) | ನೇಮಕಾತಿ ದಿನಾಂಕ | ಹಿಂದಿನ ಕಾಲೇಜಿನ ಸೇವೆ | ವರ್ಗಾವಣೆಯಾದ ಕಾಲೇಜಿನ ಹೆಸರು (ಎಲ್ಲಿಗೆ) | ವರ್ಗಾವಣೆ ಕಾಲೇಜಿಗೆ ವರದಿ ಮಾಡಿದ ದಿನಾಂಕ | ಪ್ರಸ್ತುತ ಕಾಲೇಜಿನ ಸೇವೆ | ಒಟ್ಟು ಒಟ್ಟಾರೆ ಸೇವೆ | ಸರ್ಕಾರಿ ಆದೇಶದ ದಿನಾಂಕ | ಸಹ ಪ್ರಾಧ್ಯಾಪಕರಾಗಿ ಬಡ್ತಿ ವಿವರ | ಸಹ ಪ್ರಾಧ್ಯಾಪಕರಾಗಿ ಒಟ್ಟು ಸೇವೆ |
|---|---|---|---|---|---|---|---|---|---|---|---|---|---|
| 1 | ಡಾ. ಕೆ.ಎಸ್. ಸಿದ್ದರಾಜು | ಪ್ರಾಂಶುಪಾಲರು / ಸಹ ಪ್ರಾಧ್ಯಾಪಕರು | 06-06-1970 | ಶ್ರೀ ಸಿದ್ಧಾರ್ಥ ಶಿಕ್ಷಣ ಮಹಾವಿದ್ಯಾಲಯ, ತುಮಕೂರು | 01-04-2005 | - | - | - | - | 21 ವರ್ಷ, 4 ತಿಂಗಳು, 16 ದಿನ | 10-03-2022 | 01.04.2016 ರಿಂದ ಪೂರ್ವಾನ್ವಯವಾಗಿ (ಕಾಲ್ಪನಿಕವಾಗಿ) ಸಹ ಪ್ರಾಧ್ಯಾಪಕರಾಗಿ ಬಡ್ತಿ | 10 ವರ್ಷ, 4 ತಿಂಗಳು |
| 2 | ಡಾ. ನಟರಾಜ ಆರ್. | ಸಹ ಪ್ರಾಧ್ಯಾಪಕರು | 15-06-1980 | ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯ, ಹಾಸನ | 22-12-2008 | 11.01.2024 ರವರೆಗೆ (15 ವರ್ಷ, 20 ದಿನ) | ಶ್ರೀ ಸಿದ್ಧಗಂಗಾ ಶಿಕ್ಷಣ ಮಹಾವಿದ್ಯಾಲಯ, ಬಿ.ಹೆಚ್. ರಸ್ತೆ, ತುಮಕೂರು | 12-01-2024 | 02 ವರ್ಷ, 07 ತಿಂಗಳು, 05 ದಿನ | 17 ವರ್ಷ, 07 ತಿಂಗಳು, 26 ದಿನ | 26-02-2024 | 19.05.2023 ರಿಂದ ಜಾರಿಗೆ ಬರುವಂತೆ ಸಹ ಪ್ರಾಧ್ಯಾಪಕರಾಗಿ ಬಡ್ತಿ | 3 ವರ್ಷ, 2 ತಿಂಗಳು, 13 ದಿನ |
| 3 | ಡಾ. ಕುಮಾರ್ ಕೆ. | ಸಹ ಪ್ರಾಧ್ಯಾಪಕರು | 10-01-1973 | ಎಂ.ಇ.ಎಸ್. ಶಿಕ್ಷಣ ಮಹಾವಿದ್ಯಾಲಯ, ಬೆಂಗಳೂರು | 05-06-2003 | 26.12.2021 ರವರೆಗೆ (18 ವರ್ಷ, 06 ತಿಂಗಳು, 21 ದಿನ) | ಶ್ರೀ ಸಿದ್ಧಗಂಗಾ ಶಿಕ್ಷಣ ಮಹಾವಿದ್ಯಾಲಯ, ಬಿ.ಹೆಚ್. ರಸ್ತೆ, ತುಮಕೂರು | 27-12-2021 | 04 ವರ್ಷ, 07 ತಿಂಗಳು, 21 ದಿನ | 23 ವರ್ಷ, 02 ತಿಂಗಳು, 12 ದಿನ | 28-04-2025 | 17.05.2024 ರಿಂದ ಜಾರಿಗೆ ಬರುವಂತೆ ಸಹ ಪ್ರಾಧ್ಯಾಪಕರಾಗಿ ಬಡ್ತಿ | 2 ವರ್ಷ, 2 ತಿಂಗಳು, 15 ದಿನ |

28/8/26

ಉಪಕುಲಸಚಿವರು
ವಿದ್ಯಾವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು